ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in/
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)

ಸಂಖ್ಯೆ: ಕವಿಪ್ರನಿನಿ/ಬಿ16/10288/2020-21 ದಿನಾಂಕ: 15 NOV 2021

## ಸುತ್ತೋಲೆ

**ವಿಷಯ:** 'ಸಿ' ಮತ್ತು 'ಡಿ' ಪದವೃಂದ ನೌಕರರ ನಿವೃತ್ತಿ ಸೌಲಭ್ಯಗಳ ಮೊತ್ತದಿಂದ ಕಡಿತಗೊಳಿಸಿರುವ ಹಣವನ್ನು ಮರುಪಾವತಿಸುವಂತೆ ಕೋರುತ್ತಿರುವ ಬಗ್ಗೆ.

***

ಕವಿಪ್ರನಿನಿ ಹಾಗೂ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಅಧಿಕಾರಿಗಳು/ನೌಕರರಿಗೆ, ನಿಯಮಾನುಸಾರ ಕಾಲಕಾಲಕ್ಕೆ ಹೊರಡಿಸಲಾಗುವ ಆದೇಶಗಳ ಮೇರೆಗೆ ನೇಮಕಾತಿ ಹಾಗೂ ಪದೋನ್ನತಿ ಹೊಂದಿದಾಗ/ಅಧಿಕ ವೇತನ ಬಡ್ತಿ/ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯ/ಕೆರಿಯರ್ ಅಡ್ವಾನ್ಸ್‌ಮೆಂಟ್ ಕಾರ್ಯಯೋಜನೆಯ ಸೌಲಭ್ಯಗಳನ್ನು ನಿಗದಿತ ಸಮಯದಲ್ಲಿ ಮಂಜೂರು ಮಾಡಿ ವೇತನವನ್ನು ನಿಗಧಿಪಡಿಸಬೇಕಿರುತ್ತದೆ. ಮುಂದುವರೆದು, ಪ್ರಕರಣಕ್ಕನುಗುಣವಾಗಿ ವೇತನ ನಿಗಧಿಪಡಿಸುವ ಕುರಿತು ಈಗಾಗಲೇ ಹಲವಾರು ಆದೇಶ/ಸ್ಪಷ್ಟೀಕರಣಗಳನ್ನು ನೀಡಲಾಗಿರುತ್ತದೆ. ಆದಾಗ್ಯೂ ಈ ರೀತಿ ಸೇವಾ ಸೌಲಭ್ಯಗಳನ್ನು ಮಂಜೂರು ಮಾಡಿ ವೇತನ ನಿಗಧಿಪಡಿಸುವಾಗ ಸಂದೇಹ ಉಂಟಾದಲ್ಲಿ, ಸಮುಚಿತ ಮಾರ್ಗದ ಮೂಲಕ ನಿಗಮ ಕಾರ್ಯಾಲಯಕ್ಕೆ ಸ್ಪಷ್ಟೀಕರಣ ಕೋರುವಂತೆಯೂ ತಿಳಿಸಲಾಗಿರುತ್ತದೆ.

ಕೆಲವು ಕಚೇರಿಗಳಲ್ಲಿ ನಿಗಮದ ಆದೇಶಗಳನ್ನು ತಪ್ಪಾಗಿ ಅರ್ಥೈಸಿ/ವ್ಯಾಖ್ಯಾನಿಸಿ ನೌಕರರ ವೇತನವನ್ನು ಹೆಚ್ಚಿನ ಹಂತದಲ್ಲಿ ನಿಗಧಿಪಡಿಸಿ, ಸದರಿ ಲೋಪವನ್ನು ನೌಕರರು ಸೇವೆಯಲ್ಲಿರುವಾಗಲೇ ಸರಿಪಡಿಸದೇ ನೌಕರರು ನಿವೃತ್ತಿ ಹೊಂದುತ್ತಿರುವ ವೇಳೆಯಲ್ಲಿ ನೌಕರರ ಸೇವಾ ಪುಸ್ತಕವನ್ನು ಪರಿಶೀಲಿಸಿ ತಪ್ಪಾಗಿ ನಿಗಧಿಪಡಿಸಲಾಗಿದ್ದ ವೇತನವನ್ನು ಸರಿಪಡಿಸಿ, ನೌಕರರಿಗೆ ಹೆಚ್ಚುವರಿಯಾಗಿ ಪಾವತಿಸಲಾಗಿದ್ದ ಮೊತ್ತವನ್ನು ನೌಕರರ ಪಿಂಚಣಿ ಸವಲತ್ತುಗಳಿಂದ ಮುರಿದುಕೊಳ್ಳಲಾಗುತ್ತಿದೆ.

ಹೆಚ್ಚುವರಿಯಾಗಿ ಪಾವತಿಸಲಾಗಿದ್ದ ಮೊತ್ತವನ್ನು ನೌಕರರ ಪಿಂಚಣಿ ಸವಲತ್ತುಗಳಿಂದ ವಸೂಲಿ ಮಾಡಿಕೊಂಡಿರುವ ಪ್ರಕರಣಗಳಲ್ಲಿ ನೌಕರರು ಮಾನ್ಯ ನ್ಯಾಯಾಲಯದ ಮೊರೆ ಹೋಗುತ್ತಿರುತ್ತಾರೆ. ನೌಕರರಿಗೆ ಹೆಚ್ಚಾಗಿ ಪಾವತಿಸಲಾಗಿದ್ದ ಮೊತ್ತವನ್ನು ಹಿಂಪಡೆಯುವ ಬಗ್ಗೆ ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಿ, ನೌಕರರಿಗೆ ಮೊತ್ತವನ್ನು ಹಿಂತಿರುಗಿಸುವಂತೆ ಹಲವಾರು ಪ್ರಕರಣಗಳಲ್ಲಿ ಮಾನ್ಯ ಉಚ್ಚನ್ಯಾಯಾಲಯವು ಆದೇಶಿಸಿದ್ದು, ಇದರಿಂದ ನಿಗಮಕ್ಕೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುತ್ತಿದೆ. ಅಲ್ಲದೇ ಕೆಲವು ಪ್ರಕರಣಗಳಲ್ಲಿ ಹಿಂದಿರುಗಿಸುವ ಮೊತ್ತದ ಮೇಲೆ ಬಡ್ಡಿ ಪಾವತಿಸುವಂತೆಯೂ ತಿಳಿಸಲಾಗಿರುತ್ತದೆ.

ಮೇಲ್ಕಂಡ ಮಾಹಿತಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಕವಿಪ್ರನಿನಿ/ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ನಿಗಮದ ಆದೇಶಾನುಸಾರ ಕಾಲಕಾಲಕ್ಕೆ ಮಂಜೂರು ಮಾಡಬೇಕಾದ ಅರ್ಹ ಸೌಲಭ್ಯಗಳನ್ನು ನಿಗದಿತ ಸಮಯದಲ್ಲಿ ಮಂಜೂರು ಮಾಡಿ, ವೇತನವನ್ನು ನಿಗಮದ ಆದೇಶ/ಸ್ಪಷ್ಟೀಕರಣಗಳ ಪ್ರಕಾರ ಸರಿಯಾದ ಕ್ರಮದಲ್ಲಿ ವೇತನವನ್ನು ಮರುನಿಗಧಿಪಡಿಸಿರುವ ಬಗ್ಗೆ ಪ್ರತಿ ವರ್ಷವು ಸಿ ಮತ್ತು ಡಿ ಪದವೃಂದ ನೌಕರರ ಸೇವಾ ಪುಸ್ತಕವನ್ನು ಪರಿಶೀಲಿಸುವುದು ಕಡ್ಡಾಯವಾಗಿರುತ್ತದೆ.

ನೌಕರರು ನಿವೃತ್ತಿ ಹೊಂದುವ ವೇಳೆಯಲ್ಲಿ ಹೆಚ್ಚುವರಿಯಾಗಿ ಪಾವತಿಯಾದ ಮೊತ್ತವನ್ನು ಕಡಿತಗೊಳಿಸುವಂತೆ ಆದೇಶಿಸಿ, ಅಂತಹ ನೌಕರರು ಮೊತ್ತವನ್ನು ಕಡಿತಗೊಳಿಸದಂತೆ ಮಾನ್ಯ ನ್ಯಾಯಾಲಯದ ಮೊರೆ ಹೋದಲ್ಲಿ, ಮತ್ತು ಮುರಿಕೆ ಮಾಡಿದ ಮೊತ್ತವನ್ನು ಹಿಂದಿರುಗಿಸುವಂತೆ/ಈ ಮೊತ್ತಕ್ಕೆ ಬಡ್ಡಿ ಪಾವತಿಸುವಂತೆ ತಿಳಿಸಿ ವ್ಯತಿರಿಕ್ತ ಆದೇಶಗಳನ್ನು ನ್ಯಾಯಾಲಯದಿಂದ ಹೊರಡಿಸಿದಲ್ಲಿ, ಅಂತಹ ಹೆಚ್ಚುವರಿ ಆರ್ಥಿಕ ನಷ್ಟಕ್ಕೆ, ನೌಕರರು ನಿವೃತ್ತಿ ಹೊಂದಿದ/ಹೊಂದುತ್ತಿರುವ ಕಚೇರಿಯ ಮುಖ್ಯಸ್ಥರುಗಳ, ವೇತನ ಬಟವಾಡೆ ಅಧಿಕಾರಿಗಳ ಹಾಗೂ ಸಂಬಂಧಿಸಿದ ಆಂತರಿಕ ಪರಿಶೋಧನೆಯ ಅಧಿಕಾರಿಗಳ ಗುರುತರ ಕರ್ತವ್ಯ ನಿರ್ಲಕ್ಷತೆಗಾಗಿ ನೇರ ಹೊಣೆಗಾರರನ್ನಾಗಿ ಮಾಡುವಂತೆ ತಿಳಿಸಲಾಗಿದೆ.

ಪ್ರಕರಣಕ್ಕನುಗುಣವಾಗಿ, ಕಟ್ಟುನಿಟ್ಟಾಗಿ ಮೇಲ್ಕಂಡಂತೆ ಕ್ರಮ ಕೈಗೊಳ್ಳುವುದು. ಒಂದು ವೇಳೆ ಕ್ರಮ ಕೈಗೊಳ್ಳುವಾಗ ಸಂದೇಹ ಉಂಟಾದಲ್ಲಿ ಪ್ರಸ್ತಾವನೆಯನ್ನು ನಿಗಮ ಕಾರ್ಯಾಲಯಕ್ಕೆ ಸಲ್ಲಿಸಿ, ಸೂಕ್ತ ಸ್ಪಷ್ಟೀಕರಣ ಪಡೆದುಕೊಳ್ಳುವಂತೆ ತಿಳಿಸಲಾಗಿದೆ.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

ಗೆ:

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಚೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು (ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

https://kptcl.karnataka.gov.in/ for information of:

6. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿಭವನ, ಬೆಂಗಳೂರು.